ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:10.03.2026 ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ: ವಾದಿ ಪರ ಶ್ರೀ.ಎಂ.ಎಸ್.ಎ., ವಕೀಲರಿಂದ.

ನಾನು ಈ ದಾವೆಯಲ್ಲಿ ವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿರುತ್ತದೆ.

| | |
|---|---|
| ನಿ.ಪಿ.1 | ಸರ್ವೇ ನಂಬರ್ 160 ರ ಹಳೆ ಪಹಣಿ ಪತ್ರಿಕೆಗಳು |
| ನಿ.ಪಿ.2 ಮತ್ತು 3 | ಮ್ಯುಟೇಶನ್ ರಿಜಿಸ್ಟರ್ ಪ್ರತಿಗಳು |
| ನಿ.ಪಿ.4 | ದಿ:02.04.1983 ರ ವಿಲ್ ನ ದೃಢೀಕೃತ ನಕಲು( ವಿಲ್ ಪ್ರತಿಯನ್ನು ಪ್ರತಿವಾದ ಪರ ವಕೀಲರು ಮೂಲ ಪ್ರತಿ ಇಲ್ಲದ ಕಾರಣ ಮತ್ತು ವಿಲ್ಲಿನ ಸಾಕ್ಷಿದಾರರು ಇರದೆ ಇದ್ದ ಕಾರಣ ಅದನ್ನು ಗುರುತಿಸಲು ತಕರಾರು ವ್ಯಕ್ತಪಡಿಸಿರುತ್ತಾರೆ. ಸದರಿ ವಿಲ್ ನ್ನು ನೋಂದಾಯಿಸಲಾಗಿದ್ದ ಕಾರಣ, ತಾತ್ಕಾಲಿಕವಾಗಿ ಕೇವಲ ಅದನ್ನು ನಿಶಾನಿಸಲು ಈ ಹಂತದಲ್ಲಿ ನಿರಾಕರಿಸುವುದು ಸೂಕ್ತವಲ್ಲ. ಕೇವಲ ವಿಲ್ಲಿನ ಪ್ರತಿಯನ್ನು ಈಗ ನಿಶಾನಿಸಿ ಅದರ ಪುರಾವೆಯನ್ನು ವಿಲ್ಲಿನ ಸಾಕ್ಷಿದಾರರ ವಿಚಾರಣೆಯಲ್ಲಿ ರುಜುವಾತು ಪಡಿಸಬಹುದು. ಹಾಗಾಗಿ ಈ ಹಂತರದಲ್ಲಿ ಕೇವಲ ವಿಲ್ಲಿನ ಪ್ರತಿಯನ್ನು ನಿಶಾನಿಸಲಾಗಿದೆ ಅದರ ಪುರಾವೆಯನ್ನು ಸಾಕ್ಷಿದಾರರ ವಿಚಾರಣೆ ಆಗುವವರೆಗೂ ಬಾಕಿ ಇಡಲಾಗಿದೆ. ) |
| ನಿ.ಪಿ.5 | ದಿ:09.05.1990 ರ ಕ್ರಯಪತ್ರದ ದೃಢೀಕೃತ ನಕಲು |
| ನಿ.ಪಿ.6 | ದಿ:11.11.1992 ರ ಕ್ರಯಪತ್ರದ ದೃಢೀಕೃತ ನಕಲು |
| ನಿ.ಪಿ.7 | ದಾವಾ ಆಸ್ತಿಯ ಪಹಣಿ ಪತ್ರಿಕೆ |

| | |
|---|---|
| ನಿ.ಪಿ.8 | ಬೀರಪ್ಪ ರವರ ಮರಣ ಪ್ರಮಾಣ ಪತ್ರ |

ಪಾಟೀ ಸವಾಲುಃ (ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

C/c/ I ಅಪರ ಸಿವಿಲ್ ನ್ಯಾಯಾಧೀಶರು ಮತ್ತು

*ಜೆ.ಎಂ.ಎಫ್.ಸಿ. ಶ್ರೀನಿವಾಸಪುರ.*